ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5067/2014

ಪ್ರಾ ಸಾ 9 ಚಾ ಸಾ 10

ಹೆಸರುಃ ಈರಪ್ಪ

ತಂದೆಯ ಹೆಸರುಃ ಲೇಟ್ ಜವರಯ್ಯ

ವಯಸ್ಸುಃ 64 ವರ್ಷ

ಉದ್ಯೋಗಃ ನಿವೃತ್ತ ಸೂಪರಿಂಟೆಂಡೆಂಟ್,
ನೀರು ಸರಬರಾಜು ಇಲಾಖೆ

ವಾಸಃ ಮೈಸೂರು

**ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 299 ರಡಿ ವಿಚಾರಣೆಃ**

ಸಾಕ್ಷಿಯನ್ನು ದಿಃ 21.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ಮೈಸೂರಿನ ಶ್ರೀರಾಂಪುರ 1ನೇ ಹಂತದಲ್ಲಿ ನನ್ನ ಒಂದು ಮನೆ ಇದ್ದು ಅದರಲ್ಲಿ ಕೆಳ ಅಂತಸ್ತು ಮತ್ತು ಮೊದಲನೇ ಅಂತಸ್ತಿಲ್ಲಿ ಎರಡು ಪ್ರತ್ಯೇಕ ಮನೆಗಳನ್ನು ಕಟ್ಟಿರುತ್ತೇನೆ. ಅದರಲ್ಲಿ ನಾನು

ಮೊದಲನೇ ಅಂತಸ್ತಿನಲ್ಲಿ ಸಂಸಾರ ಸಮೇತ ವಾಸವಾಗಿದ್ದೇನೆ. ಕೆಳ ಅಂತಸ್ತಿನ ಮನೆಯನ್ನು ನಾನು ಬಾಡಿಗೆಗೆ ಕೊಟ್ಟಿರುತ್ತೇನೆ.

2. 2011 ರ ಜೂನ್ ಸಮಯದಲ್ಲಿ ನಮ್ಮ ಮನೆಯ ಹತ್ತಿರವಿದ್ದ ಶೇವಿಂಗ್ ಶಾಪ್ ನ ಶ್ರೀನಿವಾಸ್ ಎನ್ನುವವರು ನನ್ನ ಬಳಿ ಬಂದು ಜೊತೆಯಲ್ಲಿ 1 ಮತ್ತು 5ನೇ ಆರೋಪಿತರನ್ನೂ ಸಹ ಕರೆದುಕೊಂಡು ಬಂದಿದ್ದು ಅವರುಗಳಿಗೆ ಬಾಡಿಗೆಗೆ ಮನೆ ಬೇಕು ಎಂದು ನನಗೆ ತಿಳಿಸಿದರು. ಶ್ರೀನಿವಾಸ್ ರವರ ಜೊತೆ ಬಂದಿದ್ದ 1ನೇ ಆರೋಪಿಯು ತನಗೆ ಮದುವೆಯಾಗಿದ್ದು ತನ್ನ ಹೆಂಡತಿ ಗರ್ಭಿಣಿ ಇರುವುದರಿಂದ ಈಗ ಸದ್ಯಕ್ಕೆ ನಾನು ಮತ್ತು ನನ್ನ ಸ್ನೇಹಿತರು ವಾಸವಿರುತ್ತೇವೆಂದು ತಿಳಿಸಿದ್ದು ನಾನು ತಿಂಗಳಿಗೆ 3500/- ರೂ. ಬಾಡಿಗೆ ಮತ್ತು 30 ಸಾವಿರ ರೂ. ಮುಂಗಡ ಹಣ ಎಂದು ಹೇಳಿದೆ. ನಂತರ 1ನೇ ಆರೋಪಿಯು ನನ್ನ ಜೊತೆ ಮಾತನಾಡಿ ತಿಂಗಳಿಗೆ 3100/- ರೂ. ನಂತೆ ಬಾಡಿಗೆ ಕೊಡಲು ಒಪ್ಪಿದ್ದ. ಅದೇ ದಿನ ಸಂಜೆ ಬಾಡಿಗೆ ಮುಂಗಡ ಹಣ 30 ಸಾವಿರ ರೂಗಳನ್ನು ನನಗೆ ನೀಡಿ 1ನೇ ಆರೋಪಿಯು ತನ್ನ ಹೆಸರಿನಲ್ಲಿ ಬಾಡಿಗೆ ಕರಾರನ್ನು ಮಾಡಿಕೊಂಡಿರುತ್ತಾನೆ. ನಂತರ ಸದರಿ ಬಾಡಿಗೆ ಮನೆಯಲ್ಲಿ ಒಟ್ಟು ನಾಲ್ಕು ಜನರು ವಾಸವಾಗಿದ್ದರು. ಅವರುಗಳು ಒಂದು ಸ್ಕಾರ್ಪಿಯೋ ವಾಹನದಲ್ಲಿ ಓಡಾಡುತ್ತಿದ್ದು ರಾತ್ರಿ ಸಮಯದಲ್ಲಿ ಸದರಿ ವಾಹನವನ್ನು ನಮ್ಮ ಮನೆಯ ಮುಂದೆಯೇ ನಿಲ್ಲಿಸಿಕೊಳ್ಳುತ್ತಿದ್ದರು.

3. ನಂತರ ದಿಃ 23.06.2011 ರಲ್ಲಿ ತುಮಕೂರಿನ ಕ್ಯಾತಸಂದ್ರ ಪೊಲೀಸರು ಬಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದ 1 ರಿಂದ 4ನೇ ಆರೋಪಿತರನ್ನು ದಸ್ತಗಿರಿ ಮಾಡಿಕೊಂಡು ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ.

4. ನಂತರ ದಿಃ 11.02.2011 ರಂದು ಸದರಿ ಕ್ಯಾತಸಂದ್ರ ಪೊಲೀಸರು ನಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದ 4 ಜನ ಆರೋಪಿತರನ್ನು ಜೊತೆಯಲ್ಲಿ ನಾಗರಾಜು ಎನ್ನುವ ವ್ಯಕ್ತಿಯನ್ನು ಕರೆದುಕೊಂಡು ನಮ್ಮ ಮನೆ ಬಳಿ ಬಂದಿದ್ದು ಆಗ ಸಮಯ ರಾತ್ರಿ 10 ಗಂಟೆಯಾಗಿತ್ತು. ಪೊಲೀಸರು ನನಗೆ ತಮ್ಮ ಜೊತೆ ಕರೆದುಕೊಂಡು ಬಂದಿದ್ದ ಆರೋಪಿಗಳು, ನಾಗರಾಜು ಮತ್ತು ಇತರೆ ಇಬ್ಬರು ಮೂರು ಜನ ವ್ಯಕ್ತಿಗಳು ಕಳವು ದರೋಡೆ ಕೃತ್ಯಗಳನ್ನು ಮಾಡುತ್ತಿದ್ದು ಆ ಕಾರಣಕ್ಕಾಗಿ ದಸ್ತಗಿರಿ ಮಾಡಿದ್ದೇವೆ ಎಂದು ತಿಳಿಸಿದರು.

5. ಆರೋಪಿಗಳ ಪೈಕಿ 1ನೇ ಆರೋಪಿಯು ಬಾಡಿಗೆಗೆ ಇದ್ದ ಮನೆಯಿಂದ ಒಂದು ಕ್ಯಾಷ್ ಬ್ಯಾಗ್ ನ್ನು ತಂದು ಹಾಜರುಪಡಿಸಿದ್ದು ಅದನ್ನು ತೆರೆದು ನೋಡಿದಾಗ ಅದರಲ್ಲಿ ಹಣ ಇತ್ತು ಮತ್ತು ಜೊತೆಯಲ್ಲಿ ಸಿಮ್ ಕಾರ್ಡ ಇದ್ದ ಬಗ್ಗೆ ಪೊಲೀಸರು ತಿಳಿಸಿದರು. 2ನೇ ಆರೋಪಿಯನ್ನು ಶೋಧಿಸಿದಾಗ ಆತನ ಬಳಿ ಒಂದು ಪಿಸ್ತೂಲ್ ಇದ್ದು ಅದಕ್ಕೆ ಸಂಬಂಧಿಸಿದಂತೆ 2ನೇ ಆರೋಪಿಯು ತನ್ನ ಬಳಿ ಯಾವುದೇ ಲೈಸನ್ಸ್ ಇಲ್ಲ ಎಂದು ತಿಳಿಸಿದ. ನಂತರ 3ನೇ

ಆರೋಪಿಯನ್ನು ಶೋಧಿಸಿದಾಗ ಆತನ ಜೇಬಿನಲ್ಲಿ ಸುಮಾರು 50 ಸಾವಿರ ಹಣ ಇತ್ತು. 4ನೇ ಆರೋಪಿಯನ್ನು ಶೋಧಿಸಿದಾಗ ಅವನ ಬಳಿ ಏನೂ ಇರಲಿಲ್ಲ. ನಂತರ ಆರೋಪಿಗಳನ್ನು ಮತ್ತೆ ವಿಚಾರಿಸಿದಾಗ ಆರೋಪಿಗಳು ಮನೆಯಿಂದ ಎರಡು ಮಚ್ಚುಗಳು ಮತ್ತು ಎರಡು ಲಾಂಗ್ ಗಳನ್ನು ತಂದು ಹಾಜರುಪಡಿಸಿದರು. ಸದರಿ ಆಯುಧಗಳನ್ನು ದುಷ್ಕೃತ್ಯವೆಸಗಲು ನಾವು ಇಟ್ಟುಕೊಂಡಿದ್ದೆವು ಎಂದು ಆರೋಪಿಗಳು ಪೊಲೀಸರಿಗೆ ತಿಳಿಸಿದರು. ಮೇಲಿನ ಎಲ್ಲಾ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಪೊಲೀಸರು ಸ್ಥಳದಲ್ಲಿ ಮಹಜರು ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಮಹಜರಿಗೆ ನಾನು ಸ್ಥಳದಲ್ಲಿಯೇ ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಮಹಜರಿನ ಯಾಥಾ ನಕಲು ಪ್ರತಿ ಮೂಲ ಎಸ್ ಸಿ ನಂ. 131/2012 ರಲ್ಲಿ ಇದ್ದು ಅದರಲ್ಲಿನ ಸಹಿಯನ್ನು ಸಾಕ್ಷಿಯು ಗುರುತಿಸುತ್ತಾರೆ.

ಪಾಟೀ ಸವಾಲುಃ 1, 2 ಮತ್ತು 4ನೇ ಆರೋಪಿತರು ತಲೆಮರೆಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

(ಮು. ಮಾಲು ರಿಂದ ಸೀಲಾಗಿದ್ದು ಸಾಕ್ಷಿಗೆ ತೋರಿಸುವ ಉದ್ದೇಶದಿಂದ ಅಭಿಯೋಜಕರ ಮನವಿಯ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಅವುಗಳ ಮೇಲಿದ್ದ ಸೀಲನ್ನು ಒಡೆದು ಸಾಕ್ಷಿಗೆ ತೋರಿಸಿ ನಿಶಾನೆಯಾಗಿ ಗುರುತಿಸಲಾಯ್ತು.)